# ಅಧ್ಯಾತ್ಮ ಮತ್ತಷ್ಟು...

'ಮಾನವೀಯತೆಯೊಂದಿಗಿನ ಅನುಸಂಧಾನವೇ ಅಧ್ಯಾತ್ಮ' ಎನ್ನುವ ಮಾತು, ಪರಸ್ಪರ ಸಂಬಂಧವಿಲ್ಲದ ಆಕರ್ಷಕ ಪದಗಳ ಜೋಡಣೆಯಂತೆ ಕಾಣಿಸುತ್ತದಲ್ಲವೇ? ಹಾಗೆ ಕಾಣಿಸಲಿಕ್ಕೆ ಎರಡು ಕಾರಣಗಳಿವೆ. ಮೊದಲನೆಯದು, ಅಧ್ಯಾತ್ಮ 'ಅಲೌಕಿಕ ಸಂಗತಿ' ಎಂದು ತಿಳಿಯುವುದು. ಎರಡನೆಯದು, ಮಾನವೀಯತೆಯ ಚೌಕಟ್ಟನ್ನು ಸಂಕುಚಿತಗೊಳಿಸುವುದು.

ಒಳ್ಳೆಯತನ ಅಥವಾ ಮಾನವೀಯತೆ ಎಂದರೇನು ಎನ್ನುವ ಪ್ರಶ್ನೆಗೆ ಉತ್ತರ ಸ್ಪಷ್ಟಪಡಿಸಿಕೊಳ್ಳುವುದರೊಂದಿಗೆ ಈ ಚರ್ಚೆಯನ್ನು ಮುಂದುವರಿಸಬಹುದು. ತೊಂದರೆಯಲ್ಲಿ ಇರುವವರಿಗೆ ನೆರವಾಗುವ ಮನೋಭಾವವೇ ಮಾನವೀಯತೆ ಎನ್ನುವುದು ರೂಢಿಯಲ್ಲಿರುವ ಅರ್ಥ. ಉದಾಹರಣೆಗೆ, ರಸ್ತೆಯಲ್ಲಿ ಬಿದ್ದ ವ್ಯಕ್ತಿಯನ್ನು ಎತ್ತಿ ಉಪಚರಿಸುವುದು, ಅಗತ್ಯವಿದ್ದಲ್ಲಿ ಆಸ್ಪತ್ರೆಗೆ ಒಯ್ಯುವುದು. ನಡೆಯುವ ದಾರಿಯಲ್ಲಿ ಬಿದ್ದ ಗಾಜಿನ ಚೂರನ್ನು ಪಕ್ಕಕ್ಕೆ ಸರಿಸುವುದೂ ಒಳ್ಳೆಯ ಕೆಲಸವೇ. ಹಸಿದವರಿಗೆ ಅನ್ನ ನೀಡುವುದೂ ಒಳ್ಳೆಯತನವೇ. ಇಂಥ 'ಒಳ್ಳೆಯ ಕೆಲಸ'ಗಳ ಬಗ್ಗೆ ಶಾಲಾಮಕ್ಕಳು ಡೈರಿ ಬರೆಯುತ್ತಾರೆ. ಆದರೆ, ಸಂಕಷ್ಟದ ಸಮಯದಲ್ಲಿ ಜಾಗೃತಗೊಳ್ಳುವ ಸಂವೇದನಾ ಸ್ಥಿತಿಯ ಈ ಉದಾಹರಣೆಗಳು ಮಾನವೀಯತೆಯ ಸಂಕೀರ್ಣ ಸ್ವರೂಪವನ್ನು ಪೂರ್ಣ ರೂಪದಲ್ಲಿ ಕಟ್ಟಿಕೊಡಲಾರವು. ಮಾನವೀಯತೆ ತನ್ನ ಪೂರ್ಣ ರೂಪದಲ್ಲಿ, ಯಾವುದೋ ಸಂದರ್ಭದಲ್ಲಿ ಎಚ್ಚರಗೊಳ್ಳುವ ಸಂವೇದನೆಯಾಗಿ ಉಳಿದಿರುವುದಿಲ್ಲ. ಅದು, ಸದಾ ಕಾಲ ಜಾಗೃತವಾಗಿ ಇರುವಂತಹದ್ದು. ನಮ್ಮ ಬದುಕನ್ನು ಸಮಾಜದ ಒಳಿತಿಗೆ ಪೂರಕವಾಗಿ ರೂಪಿಸಿಕೊಳ್ಳುವ ವಿಧಾನವೇ ನಿಜ ಅರ್ಥದ ಮಾನವೀಯತೆ. ಗಾಂಧಿ ಮಹಾತ್ಮನನ್ನು, ತೆರೇಸಾ ಅಮ್ಮನನ್ನು ನೆನಪಿಸಿಕೊಂಡರೆ ಈ ಮಾತು ಮನದಟ್ಟಾಗುತ್ತದೆ.

ಮಹಾತ್ಮ ಗಾಂಧೀಜಿ ಮನುಕುಲ ಕಂಡ ಬಹುದೊಡ್ಡ ಮಾನವತಾವಾದಿಯಷ್ಟೇ ಅಲ್ಲ, ಅಧ್ಯಾತ್ಮ ಸಾಧಕರೂ ಆಗಿದ್ದರು. ಅಧ್ಯಾತ್ಮ ಸಾಧನೆ ಹಾಗೂ ಮಾನವೀಯತೆ ಅವರ ಪಾಲಿಗೆ ಒಂದೇ ನಾಣ್ಯದ ಭಿನ್ನ ಮುಖಗಳಾಗಿದ್ದವು. ಪ್ಲೇಗ್ ಪೀಡಿತರ ಶುಶ್ರೂಷೆ ಅವರಿಗೆ ಧ್ಯಾನದಂತೆ ಪರಿಣಮಿಸಿತ್ತು. ಅಸ್ಪೃಶ್ಯತೆ ತೊಡೆದುಹಾಕುವ ಹಾಗೂ ಹಿಂದೂ ಮುಸ್ಲಿಮರ ನಡುವೆ ಸೌಹಾರ್ದ ಮೂಡಿಸುವ ನಿಟ್ಟಿನಲ್ಲಿ ಅವರು ನಡೆಸಿದ ಪ್ರಯತ್ನಗಳು, ರಾಜಕೀಯ ಚಟುವಟಿಕೆಗಳು ಅಥವಾ ಮಾನವೀಯ ನೆಲೆಗಟ್ಟಿನ ಕ್ರಿಯೆಗಳು ಮಾತ್ರವಾಗಿರಲಿಲ್ಲ. ಆ ಚಟುವಟಿಕೆಗಳನ್ನು ಅವರ ಅಧ್ಯಾತ್ಮ ಚಿಂತನೆ ಮತ್ತು ಪ್ರಯೋಗದ ಭಾಗವಾಗಿಯೇ ನೋಡಬೇಕು. ಮಾನವೀಯತೆ ಮತ್ತು ಅಧ್ಯಾತ್ಮದ ನಡುವಿನ ಅಭಿನ್ನತೆ ಸಾಧ್ಯವಾದುದರಿಂದಲೇ ಸ್ವಾತಂತ್ರ್ಯ ಚಳವಳಿಗೆ ಅಧ್ಯಾತ್ಮದ ಸ್ವರೂಪವನ್ನು ದೊರಕಿಸಿಕೊಡುವುದು ಮಹಾತ್ಮನಿಗೆ ಸಾಧ್ಯವಾಯಿತು. ಗಾಂಧೀಜಿ ಪ್ರತಿಪಾದಿಸಿ, ಅನುಸರಿಸಿದ ಸತ್ಯ ಮತ್ತು ಅಹಿಂಸೆ ಮಾನವೀಯ ಮೌಲ್ಯಗಳಷ್ಟೇ ಅಲ್ಲ, ಅವು ಅಧ್ಯಾತ್ಮ ಮಾರ್ಗದ ಊರುಗೋಲುಗಳೂ ಹೌದು. ಪ್ರತಿಯೊಬ್ಬ ಸತ್ಯಾಗ್ರಹಿಯೂ ಅಧ್ಯಾತ್ಮವಾದಿಯೇ.

ವ್ಯಕ್ತಿಯೊಬ್ಬ ಆಧ್ಯಾತ್ಮಿಕ ಆಗಿರುವುದು ಎಂದರೆ, ಪರಹಿತ ಚಿಂತನೆಯಲ್ಲಿ ತೊಡಗಿರುವುದು ಎನ್ನುತ್ತದೆ ಗಾಂಧಿಚಿಂತನೆ. ಪರಹಿತ ಚಿಂತನೆ ಎನ್ನುವ ಮಾತನ್ನು ಸೂಕ್ಷ್ಮವಾಗಿ ಗಮನಿಸಬೇಕು. ಇದು, ತನ್ನನ್ನು ಇತರರಲ್ಲಿ ಹಾಗೂ ಇತರರನ್ನು ತನ್ನಲ್ಲಿ ಕಂಡುಕೊಳ್ಳಲು ಅವಕಾಶ ಕಲ್ಪಿಸುವ ಚಿಂತನೆ.

'ಅಧ್ಯಾತ್ಮ' ಎನ್ನುವ ಪದಕ್ಕೆ 'ತನ್ನನ್ನು ತಾನು ಅರಿಯುವುದು' ಎನ್ನುವ ಅರ್ಥವೊಂದಿದೆ. 'ತನ್ನನ್ನು ತಾನು ತಿಳಿಯುವುದು ಎಂದರೇನು' ಎನ್ನುವ ಪ್ರಶ್ನೆಗೆ, 'ಆತ್ಮವನ್ನು ಅರಿಯುವುದು' ಎಂದು ಹೇಳಬಹುದು. ಆತ್ಮಕ್ಕೆ ಸಂಬಂಧಿಸಿದ, ಪರಮಾತ್ಮನಿಗೆ ಸಂಬಂಧಿಸಿದ ಸಂಗತಿಯೇ ಅಧ್ಯಾತ್ಮ. ಆತ್ಮವನ್ನು ಅರಿತುಕೊಳ್ಳುವ ನಿಟ್ಟಿನಲ್ಲಿ ನಡೆಸುವ ಪ್ರಯತ್ನಗಳೇ ಅಧ್ಯಾತ್ಮ ಸಾಧನೆ. ಈ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಗಾಂಧಿಯನ್ನು ಮತ್ತೆ ನೆನಪಿಸಿಕೊಳ್ಳಬೇಕು. ಆತ್ಮ ಎನ್ನುವುದನ್ನು ನಾವು 'ಸ್ವ' ಎನ್ನುವ ಅರ್ಥದಲ್ಲಿ ಬಳಸುತ್ತೇವೆ. ಎಷ್ಟು ಸಂಖ್ಯೆಯ ಮನುಷ್ಯರೋ ಅಷ್ಟೂ ಆತ್ಮಗಳು. ಆದರೆ, ಗಾಂಧಿ ಅವರ 'ಪರಹಿತ ಚಿಂತನೆ'ಯಲ್ಲಿ ಈ ಅಸಂಖ್ಯ ಆತ್ಮಗಳಿಗೆ ಅವಕಾಶವಿಲ್ಲ. 'ನಾವೆಲ್ಲರೂ ಆತ್ಮ ಅಥವಾ ಬ್ರಹ್ಮದ ಭಾಗವಾಗಿದ್ದೇವೆ' ಎನ್ನುವುದು ಗಾಂಧಿಚಿಂತನೆಯ ತಿರುಳು. ಆ ಕಾರಣದಿಂದಲೇ ನಮ್ಮನ್ನು ನಾವು ನೋಡಿಕೊಳ್ಳುವ ಕ್ರಿಯೆ, ಇತರರಲ್ಲಿ ನಮ್ಮನ್ನು ಕಂಡುಕೊಳ್ಳುವ ಪ್ರಯತ್ನವೂ ಆಗಿರುತ್ತದೆ. ಪರಸ್ಪರ ಸ್ಪಂದಿಸುವ, ಸಂವಹನ ನಡೆಸುವ ಆತ್ಮಗಳು ಮೂಲಸ್ವರೂಪದಲ್ಲಿ ಅಭಿನ್ನವಾಗಿರುತ್ತವೆ. ಒಬ್ಬನೇ ಪರಮಾತ್ಮನನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವಂತೆ, ಅಖಂಡ ಆತ್ಮವನ್ನು ವ್ಯಕ್ತಿಗಳ ರೂಪದಲ್ಲಿ ಗುರ್ತಿಸುತ್ತೇವೆ. ಹೀಗೆ, ಒಡೆದುನೋಡುವ ವ್ಯಸನ ಬಲಗೊಳ್ಳುತ್ತಾ ಹೋದಾಗ ಹಟಯೋಗಿಗಳು ರೂಪುಗೊಳ್ಳಬಹುದಷ್ಟೇ. ಇಂಥ ಹಟಯೋಗಿಗಳ ಉದಾಹರಣೆಗಳು, ಆತ್ಮವನ್ನು ಅಲೌಕಿಕ ಸಂಗತಿಯಾಗಿ, ಮಾನವೀಯತೆಯನ್ನು ಲೌಕಿಕ ತುರ್ತಾಗಿ ನಮಗೆ ಕಾಣಿಸುತ್ತವೆ. ಅನುದಿನದ ಲೌಕಿಕದೊಂದಿಗೆ ಅಂತರ ಸಾಧಿಸುವ ಅಧ್ಯಾತ್ಮದ ಆಚರಣೆಗಳಲ್ಲಿ ಗಾಂಧಿಯವರಿಗೆ ನಂಬಿಕೆ ಇರಲಿಲ್ಲ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಅಧ್ಯಾತ್ಮದ ಅನುಸರಣೆ ಅಗತ್ಯ ಮತ್ತು ಸಾಧ್ಯ ಎನ್ನುವುದು ಅವರ ನಂಬಿಕೆಯಾಗಿತ್ತು, ನಡೆಯೂ ಆಗಿತ್ತು.

ಗಾಂಧಿಯವರ 'ಪರಹಿತ ಚಿಂತನೆ' ಕನ್ನಡದ ಸರ್ವಜ್ಞ ಕವಿಯಲ್ಲೂ ಇದೆ. 'ಅನ್ನವನಿಕ್ಕುವುದು, ನನ್ನಿಯನು ನುಡಿವುದು, ತನ್ನಂತೆ ಪರರ ಬಗೆದೊಡೆ, ಕೈಲಾಸ ಬಿನ್ನಾಣವಕ್ಕು ಸರ್ವಜ್ಞ' ಎನ್ನುವ ವಚನ, ಕೈಲಾಸದ ದಾರಿ ಈ ಮಣ್ಣಿನ ಮೇಲಿನ ನಮ್ಮ ಕ್ರಿಯೆಗಳಲ್ಲೇ ಇದೆ ಎನ್ನುವುದನ್ನು ಬಹು ಸೊಗಸಾಗಿ ಹೇಳಿದೆ. 'ಕಾಯಕವೇ ಕೈಲಾಸ' ಎಂದು ನೆಚ್ಚಿ, ಅಂತೆಯೇ ಬಾಳಿದ ಶರಣರೂ ಲೌಕಿಕದ ಬದುಕಿನಲ್ಲಿ ಅಧ್ಯಾತ್ಮದ ಅನುಸಂಧಾನ ಮಾಡಿದ ಬಲ್ಲಿದರೇ.

ಗಾಂಧಿಯಂಥರಿಗೆ ಮಾನವೀಯತೆ ಎನ್ನುವುದು ಲೌಕಿಕ ಮತ್ತು ಅಲೌಕಿಕದ ನಡುವಿನ ಸೇತುವೆ. ಸಮಾಜದ ಉನ್ನತಿಗೆ ಬೇಕಾದುದು, ಲೌಕಿಕದೊಂದಿಗೆ ಏಗಿಕೊಂಡೇ ಆತ್ಮೋನ್ನತಿಯನ್ನು ಸಾಧಿಸಿದ ಗಾಂಧಿಯಂಥವರು.

■ **ಚಂಪಕಮಾಲಾ**

## ಮಾತೇ ಮುತ್ತು

- ಯಾರೊಂದಿಗೆ ಶ್ರೇಷ್ಠ ವಿಚಾರಗಳು ಇರುತ್ತವೆಯೋ ಅವರು ಎಂದಿಗೂ ಏಕಾಂಗಿಯಾಗಲು ಸಾಧ್ಯವಿಲ್ಲ.
  —ಸ್ವಾಮಿ ವಿವೇಕಾನಂದ
- ಇನ್ನೊಬ್ಬರ ಮೇಲೆ ದ್ವೇಷ ಸಾಧಿಸುವುದು, ನಾವು ವಿಷ ಕುಡಿದು ಅವರು ಸಾಯಲಿ ಎಂದು ಕಾಯುತ್ತಾ ಕುಳಿತಂತೆ.
  —ಬುದ್ಧ
- ಜೀವನದ ರಹಸ್ಯ ಅಡಗಿರುವುದು ಪರಸ್ಪರ ನಂಬಿಕೆ ಮತ್ತು ವಿಶ್ವಾಸಗಳಿಂದ ಮಾತ್ರ.
  —ಬೇಕನ್
- ಭಾಷೆ ಕೇವಲ ಸಂವಹನದ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ಬುದ್ಧಿ ಭಾವಗಳ ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು.
  —ಕುವೆಂಪು
- ಆತ್ಮಜ್ಞಾನ ಇಲ್ಲದಿದ್ದರೆ ಆತ್ಮವಂಚನೆ ಶುರುವಾಗುತ್ತೆ. ಜಗತ್ತಿನ ಕಾಮಿಡಿಗಳ ವಸ್ತುವೇ ಇದು.
  —ಪಿ. ಲಂಕೇಶ್
- ಸುಂದರವಾದದ್ದು ಒಳ್ಳೆಯದೆಂದು ಭಾವಿಸುವುದು ಎಂತಹ ವಿಚಿತ್ರ ಭ್ರಮೆ.
  —ಲಿಯೋ ಟಾಲ್‌ಸ್ಟಾಯ್
- ಸತ್ತದೊಂದಿಗೆ ಬದುಕುವವರು ಯಾರಿಗೂ ಹೆದರಬೇಕಾಗಿಲ್ಲ.
  —ಸಾಕ್ರೆಟೀಸ್
- ನನ್ನೊಳಗಿನ ಉತ್ತಮವಾದುದನ್ನು ಹೊರ ತೆಗೆಯುವವನೇ ನನ್ನ ನಿಜವಾದ ಸ್ನೇಹಿತ.
  —ಹೆನ್ರಿ ಫೋರ್ಡ್
- ವ್ಯಕ್ತಿಯ ಮಾಗುವಿಕೆಯೇ ಸಂಸ್ಕೃತಿ.
  —ಕೆ.ಎಸ್.ನಿಸಾರ್ ಅಹಮದ್